Grant of Subsidy to Dramas

59. Sri GATTI CHANDRASHEKAR (Gubbi).—

Will the Minister for Education be pleased to state :—

whether Government is cantemplating to grant Rs. 5,000 as subsidy for presentation of a new drama on the same lines as subsidy of Rs. 50,000 is being granted for production of a film so as to save the old art of drama ?

Sri A. R. BADARINARAYANA (Minister for Education).—

No.

ಶ್ರೀ ಗಟ್ಟಿಚಂದ್ರಶೇಖರ್.—ಸ್ವಾಮಿ ಇಂದಿನ ನಿರ್ಜೀವವಾದ ಕೃತಕ ಚಲನಚಿತ್ರಗಳ ಯುಗದಲ್ಲಿ ಜೀವಂತವಾದ ನಾಟಕಗಳು ಉಳಿಯುವುದು ಕಷ್ಟವಾಗಿದೆ. ಆದ್ದರಿಂದ ಪುರಾತನ ಸಂಸ್ಕೃತಿಯ ಪ್ರತೀಕವಾದ ನಾಟಕ ಕಲೆಯನ್ನು ಉಳಿಸಿ ಬೆಳೆಸುವುದು ಸರ್ಕಾರದ ಕರ್ತವ್ಯ ಹಿಂದೆ ರಾಜಮಹಾರಾಜರುಗಳು ನಾಟಕಕಲೆಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು ಮೈಸೂರಿನ ಮಹಾರಾಜರು ಪ್ರತಿವರ್ಷ ದಸರಾದಲ್ಲಿ ಮೈನೂರಿನಲ್ಲಿ ನಾಟಕಗಳನ್ನು ಆಡಿಸಿ 3-4 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು ಈಗ ಸಿನಿಮಾಗಳಿಗೆ ಒಂದು ಸಿನಿಮಾವನ್ನು ತಯಾರು ಮಾಡಿ ಪ್ರದರ್ಶನ ಮಾಡಿದರೆ 50 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಸರ್ಕಾರದವರು ಕೊಡುತ್ತಿದ್ದಾರೆ. ಆದರಿಂದ ಆದೇರೀತಿ ಒಂದು ಹೊಸನಾಟಕ ನಿರೂಪಣೆಗೆ ಕನಿಷ್ಟ 5 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟು ಈ ಪುರಾತನ ಕಲೆಯಾದ ನಾಟಕ ಕಲೆಯು ಉಳಿಯುವಂತೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

†ಶ್ರೀ ಎ. ಆರ್. ಬದರೀನಾರಾಯಣ್.—ಹೊಸನಾಟಗಳನ್ನು ತಯಾರು ಮಾಡಿ ಅದನ್ನು ಅಭಿನಯ ಮಾಡುವುದಕ್ಕೆ ಸಹಾಯ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಡ್ರಾಮ್ಯಾಟಿಕ್ ಕಂಪನಿಗಳು ಅಲ್ಲಲ್ಲೇ ಫೇಜ್ಡ್ ಪ್ರೋಗ್ರಾಮ್ ಪ್ರಕಾರ ನಾಟಕಗಳನ್ನು ಅಭಿನಯ ಮಾಡುವುದಕ್ಕೆ ಸಂಗೀತ ನಾಟಕ ಅಕೆಡಾಮಿ ಮುಖಾಂತರ 1000 ರೂಪಾಯಿಗಳಿಂದ 1500 ರೂಪಾಯಿಗಳವರೆಗೂ ಸರ್ಕಾರದವರು ಅವರಿಗೆ ಕೊಡುತ್ತಿದ್ದಾರೆ.

ಶ್ರೀ ಗಟ್ಟಿ ಚಂದ್ರಶೇಖರ್.—ಈಗ ಹಾಲಿ ಇರತಕ್ಕ ನಾಟಕ ಕಂಪೆನಿಗಳು ಬಹಳ ಹೀನಸ್ಥಿತಿಯಲ್ಲಿವೆ. ಆದರಿಂದ ಅವರು ಒಂದು ಹೊಸ 'ನಾಟಕವನ್ನು ಮಾಡುವ ದೃಷ್ಟಿಯಿಂದ ಅವರಿಗೆ 5 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ್.—ಸರ್ಕಾರದವರು ಅದನ್ನು ಎಗ್ಸಾಮಿನ್ ಮಾಡಿ ಸಂಗೀತನಾಟಕ ಅಕಾಡಮಿಯವರ ನೀತಿ ನಿಯಮಗಳು ಯಾವರೀತಿ ಇವೆಯೋ ಆ ರೀತಿ ಇದಕ್ಕೂ ಅನುಸರಿಸಲಾಗುತ್ತಿದೆ.

ಶ್ರೀ ಕಾಗೋಡುತಿಮ್ಮಪ್ಪ.—ರವೀಂದ್ರಕಲಾಕ್ಷೇತ್ರದಲ್ಲಿ ಹೊಸದಾಗಿ ಒಂದು ನಾಟಕವನ್ನು ಆಡಿದರೆ ಅವರಿಗೆ ಮುಫತ್ತಾಗಿ ಸ್ಥಳವನ್ನು ಒದಗಿಸುತ್ತೀರಾ ?

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ನಶಿಸಿ ಹೋಗತಕ್ಕಂಥಾ ನಾಟಕ ಕಲೆಯನ್ನು ಪುನರುಜ್ಜೀವನ ಮಾಡುವುದಕ್ಕೆ ಸರ್ಕಾರದವರು ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಏನು ?

ಶ್ರೀ ಎ. ಆರ್. ಬದರೀನಾರಾಯಣ್.—ನಶಿಸಿ ಹೋಗತಕ್ಕಂಥಾದ್ದು ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಅದು ಸರಿಯಾಗಿ ನಡೆಯುತ್ತಿದೆ. ಅದಕ್ಕೂ ಸರ್ಕಾರದವರು ಸಹಾಯವನ್ನು ಮಾಡುತ್ತಿದ್ದಾರೆ. ಒಂದು ಸಾವಿರ ರೂಪಾಯಿಗಳಿಂದ ಒಂದೂವರೆಸಾವಿರ ರೂಪಾಯಿಗಳವರೆಗೆ ಸಹಾಯವನ್ನು ಕೊಟ್ಟು ಒಂದು ನಾಟಕವನ್ನು ಅಭಿನಯ ಮಾಡಿಸುತ್ತಿದ್ದಾರೆ. ಎಲ್ಲೆಲ್ಲ ಮುನಿಸಿಪಾಲಿಟಿಗಳು ಪೆನಿಥಿಯೇಟರುಗಳನ್ನು (ರಂಗ ಮಂದಿರಗಳನ್ನು) ಕಟ್ಟುವುದಕ್ಕೆ ಮುಂದೆ ಬಂದು ಸ್ಟೆಟು ಕೊಟ್ಟು ಕಾಂಟ್ರಿಬ್ಯೂಷನ್ ಕೊಟ್ಟಿರೆ ಅಂಥಾ ಕಡೆ ಪೆನಿಥಿಯೇಟರುಗಳನ್ನು (ರಂಗ ಮಂದಿರಗಳನ್ನು) ಕಟ್ಟುವುದಕ್ಕೆ ಸರ್ಕಾರದವರು ಸಹಾಯ ಮಾಡುತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ, ಸ್ವಾತಂತ್ರ್ಯ ಬಂದಮೇಲೆ ಈ ನಾಟಕ ಕೆಂಪೆನಿಗಳು ನಶಿಸಿ ಹೋಗುತ್ತಿವೆ. ಅದ್ದರಿಂದ ನಾಟಕ ಕಲೆಯನ್ನು ಉದ್ಧಾರ ಮಾಡುವ ದೃಷ್ಟಿಯಿಂದ ಅತ್ಯುತ್ತಮವಾದ ನಾಟಕ ಕಂಪನಿಗಳಿಗೆ ಸರ್ಕಾರದವರು ಸಹಾಯ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ನರಿಯಾಗಿ ಚೆನ್ನಾಗಿ ನಡೆಯುತ್ತಾ ಇರತಕ್ಕ ನಾಟಕ ಕಂಪೆನಿಗಳಿಗೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ.

ಶ್ರೀ ಗಟ್ಟಿ ಚಂದ್ರಶೇಖರ್.— ಸಂಗೀತನಾಟಕ ಅಕೆಡಮಿಯವರು ಹೇಳಿದ ಸ್ಥಳದಲ್ಲಿ ಸ್ವಂತ ಖರ್ಚಿನಲ್ಲಿ 6 ನಾಟಕಗಳನ್ನು ಅಭಿನಯಿಸಿದರೆ 6 ಸಾವಿರ ರೂಪಾಯಿಗಳನ್ನು ನಾಟಕಕ್ಕೂ 6 ಸಾವಿರ ರೂಪಾಯಿಗಳನ್ನು ಸಾಲವಾಗಿಯೂ ಕೊಡುತ್ತಾರೆಂದು ಗೊತ್ತಾಗಿವೆ. 6 ನಾಟಕಗಳನ್ನು ಅಭಿನಯಿಸಬೇಕಾದರೆ 10-15 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಅದ್ದರಿಂದ ತಾವು ನಾಟಕಕಲೆಯಲ್ಲಿ ಒಳ್ಳೆಯ ಅಭಿರುಚಿಯುಳ್ಳವರು ; ತಾವು ಚಿಕ್ಕವಯಸ್ಸಿದಲ್ಲಿ ಸ್ತ್ರೀಪಾತ್ರವನ್ನು ಮಾಡುತ್ತಿದ್ದಿರಿ ಎಂದು ನಾನು ಕೇಳಿದ್ದೇನೆ ; ಆದಕಾರಣ ತಾವು ಇದನ್ನು ಮನಸ್ಸಿಗೆ ಹಾಕಿಕೊಂಡು ಸಹಾಯ ಮಾಡಿ ಈ ನಾಟಕ ಕಲೆಯನ್ನು ಉಳಿಸುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ನಾನು ಸ್ತ್ರೀಪಾತ್ರವನ್ನು ಮಾಡುತ್ತಿದ್ದುದು ನನಗೆ ಜ್ಞಾಪಕವಿಲ್ಲ. ಯಾರನ್ನೋ ಮಾನ್ಯಸದಸ್ಯರು ತಪ್ಪು ತಿಳಿದುಕೊಂಡಿದ್ದಾರೆ ಎಂದು ಕಾಣುತ್ತದೆ. ಹೊಸನಾಟಕಗಳಿಗೆ ಪ್ರೋತ್ಸಾಹವನ್ನು ಕೊಡತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಆದರೆ ಈಗಿನ ಆರ್ಥಿಕ ಸ್ಥಿತಿಯಲ್ಲಿ ಅದು ಫೀಜಿಬಲ್ ಅಲ್ಲ, ಧನಸಹಾಯ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ.

Collection of Various Funds from the School Boys

62. **Sri M. M. SAJJAN** (Muddebihal).—

Will the Minister for Education be pleased to state :—

(*a*) whether the Government is aware of the fact that many of the private educational instutions in Bijapur District collect coercively the building fund, testimonial fund, school leaving certificate fund, etc., from their students ;

(*b*) if so, whether the Government would propose to take any action against such institutions ?

Sri A. R. BADARINARAYANA (Minister for Education).—

(*a*) No.

(*b*) Does not arise in view of reply to clause (*a*) above.

ಶ್ರೀ ಎಂ. ಎಂ. ಸಜ್ಜನ್.—ಬಿಜಾಪುರ ಜಿಲ್ಲೆಯಲ್ಲಿ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಬರೆದು ಕೇಳಿದ್ದೀರಾ ?

† ಶ್ರೀ ಎ. ಆರ್: ಬದರಿನಾರಾಯಣ.—ಹಾಗೆ ಕೇಳಿಲ್ಲ.

ಶ್ರೀ ಎಂ. ಎಂ. ಸಜ್ಜನ್.—ಬಿಜಾಪುರ ಜಿಲ್ಲೆಯಲ್ಲಿ ಎಲ್ಲಾ ಖಾಸಗೀ ಶಾಲೆಯವರು ಕಟ್ಟಡ ನಿಧಿ ಪ್ರಮಾಣ ಪತ್ರ ನಿಧಿ ಮುಂತಾದುವುಗಳನ್ನು ಸಂಗ್ರಹಿಸುತ್ತಿದ್ದಾರೆ. ಅವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಸರ್ಕಾರದಿಂದ ಸರ್ಕ್ಯುಲರ್ ಇಶ್ಯು ಮಾಡಿದೆ. ಬರಾತ್ಕಾರವಾಗಿ ಯಾರಿಂದಲೂ ವಸೂಲು ಮಾಡಬಾರದು ಎಂದು ಹೇಳಿದ್ದೇವೆ. ವಾಲಂಟರಿಯಾಗಿ ಯಾರಾದರೂ ಕೊಟ್ಟರೆ ತೆಗೆದುಕೊಳ್ಳಬಹುದು. ಅದಕ್ಕೆ ವಿರುದ್ಧವಾಗಿ ಯಾರಾದರೂ ತಪ್ಪು ಮಾಡಿದರೆ ಅವರ ರೆಕಾಗ್ನಿಕಷನ್‌ವಿತ್‌ಡ್ರಾ ಮಾಡುತ್ತೇವೆ ; ಮತ್ತು ಗ್ರಾಂಟನ್ನು ನಿಲ್ಲಿಸುತ್ತೇವೆ.